## ಬೆಳದಿಂಗಳ ಸಂಗೀತ 189

9 ಜುಲೈ 2017

ವಯೊಲಿನ್ - ವೇಣು - ವೀಣಾ ವಾದನ

ವಯೊಲಿನ್

ವಿದ್ವಾನ್ ಎಚ್. ಕೆ. ವೆಂಕಟರಾಂ

ಕೊಳಲು

ವಿದ್ವಾನ್ ಜಿ. ರವಿಕಿರಣ್

ವೀಣೆ

ವಿದ್ವಾನ್ ಅಶ್ವಿನಿ ಆನಂದ್

ಮೃದಂಗ

ವಿದ್ವಾನ್ ಕೆ.ವಿ. ಜಯಚಂದ್ರರಾವ್

**ತಮಗೆ ಆದರದ ಸ್ವಾಗತ**

Phone: 0821-2548220, 2548221
Fax : 0821-2548219
email: jssashram@yahoo.com

# ಶ್ರೀ ಸುತ್ತೂರು ಮಠ

ಮೈಸೂರು ಶಾಖೆ, ಮೈಸೂರು

# ಬೆಳದಿಂಗಳ ಸಂಗೀತ 188

9 ಜೂನ್ 2017 * ಶುಕ್ರವಾರ * ಸಂಜೆ 6.00

ದಿವ್ಯ ಸಾನ್ನಿಧ್ಯ

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ



ಗಾಯನ

ವಿದುಷಿ ಎಚ್.ಜಿ. ಚೈತ್ರ



ಹಾರ್ಮೋನಿಯಂ

ಪಂ. ಉಮಾಕಾಂತ ಪುರಾಣಿಕ್



ತಬಲ

ಪಂ. ಎಚ್.ಎಸ್. ಗೋಪಿನಾಥ್

ವಿದುಷಿ ಎಚ್.ಜಿ. ಚೈತ್ರರವರು ಸಂಗೀತದ ಹಿನ್ನೆಲೆಯುಳ್ಳ ಕುಟುಂಬದಿಂದ ಬಂದವರು. ಹಿಂದೂಸ್ಥಾನಿ ಸಂಗೀತ ಮತ್ತು ಚಲನಚಿತ್ರ ಹಿನ್ನೆಲೆ ಗಾಯನ ಈ ಎರಡೂ ಕ್ಷೇತ್ರಗಳಲ್ಲಿನ ಖ್ಯಾತಿಯಿಂದ ಕರ್ನಾಟಕದಲ್ಲಿ ಮನೆಮಾತಾಗಿದ್ದಾರೆ. ಇವರು ಡಾ. ನಾಗರಾಜ ಹವಾಲ್ದಾರ್‌ರವರ ಬಳಿ ಹಿಂದೂಸ್ಥಾನಿ ಸಂಗೀತವನ್ನು ಕಲಿತಿದ್ದು, ಪ್ರಸ್ತುತ ಪಂ. ಕೆ.ವಿ. ನಂದಕುಮಾರ್‌ರವರ ಬಳಿ ಸಂಗೀತದ ಸೂಕ್ಷ್ಮತೆಗಳನ್ನು ಅಭ್ಯಸಿಸುತ್ತಿದ್ದಾರೆ. ಶಾಸ್ತ್ರೀಯ ಮತ್ತು ಲಘು ಸಂಗೀತ ಈ ಎರಡೂ ಪ್ರಕಾರಗಳಲ್ಲಿ ಮೆಚ್ಚುವಂತೆ ಕಾರ್ಯಕ್ರಮ ನೀಡುವ ಸಾಮರ್ಥ್ಯ ಹೊಂದಿದ್ದಾರೆ.

ಇದುವರೆಗೆ ವಿದುಷಿ ಚೈತ್ರರವರು ಸುಮಾರು 500 ಕ್ಕೂ ಹೆಚ್ಚು ಹಿಂದೂಸ್ಥಾನಿ ಸಂಗೀತ ಕಛೇರಿಗಳನ್ನು ನೀಡಿ ರಸಿಕರ ಮೆಚ್ಚುಗೆ ಗಳಿಸಿದ್ದಾರೆ. ಕನ್ನಡ, ತಮಿಳು, ತೆಲುಗು, ಮಲೆಯಾಳಂ ಮುಂತಾದ ಹಲವಾರು ಭಾಷೆಗಳಲ್ಲಿ ಸುಮಾರು 600 ಚಿತ್ರಗೀತೆಗಳನ್ನು ಹಾಡಿರುವ ಇವರು ಅಮೆರಿಕ, ದುಬೈ, ಕುವೈತ್ ಮುಂತಾದ ದೇಶಗಳಲ್ಲಿಯೂ ಕಾರ್ಯಕ್ರಮ ನೀಡಿರುತ್ತಾರೆ. ಇವರು ಹಾಡಿರುವ "ವಿಂಡ್ಸ್ ಆಫ್ ಸಂಸಾರ" ಎಂಬ ಆಲ್ಬಂಗೆ ಗ್ರ್ಯಾಮಿ ಅವಾರ್ಡ್ ಬಂದಿರುತ್ತದೆ.

ವಿದುಷಿ ಎಚ್.ಜಿ. ಚೈತ್ರ ಅವರಿಗೆ ಬಂದಿರುವ ಪ್ರಶಸ್ತಿಗಳು ಹಲವಾರು. ಅವುಗಳಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ ಅತ್ಯುತ್ತಮ ಹಿನ್ನೆಲೆ ಗಾಯಕಿ ಪ್ರಶಸ್ತಿ, ರೋಟರಿ ಯಂಗ್ ಅಚೀವರ್ಸ್ ಅವಾರ್ಡ್, ರೋಟರಿ ಸಿರಿಗಂಧ ಅವಾರ್ಡ್, ಸ್ವರಕಲಾ ಗೌರವ ಪುರಸ್ಕಾರ, ಉದಯ ಟಿ.ವಿ. ಕುಟುಂಬ ಪ್ರಶಸ್ತಿ ಇವು ಪ್ರಮುಖವಾದುವು. "ಕಾನ್ಫಿಡೆನ್ಸ್ ಸ್ಟಾರ್ ಸಿಂಗರ್", "ಪರಿಪೂರ್ಣ ಮಹಿಳೆ", "ಸರಿಗಮಪ" ಮುಂತಾದ ಹಲವಾರು ಟಿವಿ ಕಾರ್ಯಕ್ರಮಗಳಲ್ಲಿ ತೀರ್ಪುಗಾರರಾಗಿ ಭಾಗವಹಿಸಿದ್ದಾರೆ.

ಇಂತಹ ಅಪರೂಪದ ಸಾಧನೆಗಳಲ್ಲದೆ ವಿದುಷಿ ಚೈತ್ರರವರು ಇನ್‌ಫರ್ಮೇಷನ್ ಟೆಕ್ನಾಲಜಿಯಲ್ಲಿ ಬಿ.ಇ. ಪದವಿಧರರು. ಜಿಮ್ನ್ಯಾಸ್ಟಿಕ್ಸ್ ಮತ್ತು ಕತ್ತಿವರಸೆ ಸ್ಪರ್ಧೆಗಳಲ್ಲಿ 3 ವರ್ಷಗಳ ಕಾಲ ಸತತವಾಗಿ ಚಾಂಪಿಯನ್‌ಶಿಪ್ ಗಳಿಸಿರುವುದಲ್ಲದೆ, 200 ಕ್ಕೂ ಹೆಚ್ಚು ಪದಕಗಳನ್ನು ಗಳಿಸಿರುತ್ತಾರೆ.

ಇವರಿಗೆ ಪಕ್ಕವಾದ್ಯದಲ್ಲಿ ಪಂ. ಉಮಾಕಾಂತ ಪುರಾಣಿಕ್ (ಹಾರ್ಮೋನಿಯಂ) ಮತ್ತು ಪಂ. ಎಚ್.ಎಸ್. ಗೋಪಿನಾಥ್ (ತಬಲ) ಅವರುಗಳು ಸಹಕಾರ ನೀಡುತ್ತಿದ್ದಾರೆ.